ಶ್ರೀ ಕೆ. ಹೆಚ್. ರಂಗನಾಥ—(ಶಿಕ್ಷಣ ಯುವಜನ ಸೇವೆ, ಕ್ರೀಡೆ ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು)

ಅ) ಇಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

೧೧–೪೫ ಎ.ಎಂ.

ಡಾ॥ ಆರ್. ಬಿ. ಚೌದರಿ.— ಮಾನ್ಯ ಅಧ್ಯಕ್ಷರೇ, ನನಗೆ ತಿಳಿದ ಮಟ್ಟಿಗೆ ಸುಮಾರು ನಾಲ್ಕು ವರ್ಷಗಳಿಂದ ಸೆನೆಟ್ ಸಭೆಯಲ್ಲಿ ಈ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದೆ. ತಾವು ಸ್ನಾತಕೋತ್ತರ ಕೇಂದ್ರವನ್ನು ಬಿಜಾಪುರ ಹಾಗೂ ಕಾರವಾರ ಗಳಲ್ಲಿ ತೆಗೆಯುವ ವಿಚಾರ ಇಲ್ಲ ಎಂದು ಹೇಳಿದ್ದೀರಿ ? ಇದು ನಿಜವೇ ?

ಶ್ರೀ ಕೆ. ಹೆಚ್. ರಂಗನಾಥ.— ಮಾನ್ಯ ಅಧ್ಯಕ್ಷರೇ, ಈಗ ಬೆಳಗಾಂನಲ್ಲಿ ಈಗ ತಾನೆ ಪ್ರಾರಂಭವಾಗಿದೆ. ಅಲ್ಲಿ ಕೂಡಾ ವ್ಯವಸ್ಥಿತವಾಗಿ ಆದಕ್ಕೆ ಬೇಕಾದಂಥ ಹಣವನ್ನು ಒದಗಿಸಿ, ಅದು ಸಾಕಷ್ಟು ಅನುಕೂಲವನ್ನು ಪಡೆಯುವುದಕ್ಕೆ ಹಾಗೂ ಒಂದು ಮಟ್ಟಕ್ಕೆ ಬರಬೇಕಾದರೆ ಇನ್ನು ಸ್ವಲ್ಪ ಕಾಲ ಬೇಕಾಗುತ್ತದೆ. ಮತ್ತೆ ಆ ಹಿನ್ನೆಲೆಯಲ್ಲಿ ಬಿಜಾಪುರಕ್ಕೆ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ ಮಾನ್ಯ ಸದಸ್ಯರ ಬೇಡಿಕೆಯನ್ನು ನಾನು ಅಲ್ಲಗಳೆಯುವುದಿಲ್ಲ. ಆದರೆ ಸರ್ಕಾರಕ್ಕೆ ಈಗ ಅದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಡಾ॥ ಆರ್. ಬಿ. ಚೌದರಿ.— ಬೆಳಗಾಂದು ಈಗ ಶುರುವಾಗಿದೆ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಪಿ. ಜಿ. ಸೆಂಟರ್‌ನ್ನು ತೆಗೆದು ಐದಾರು ವರ್ಷವಾಯಿತು. ಬಿಜಾಪುರದಲ್ಲಿ ಸಹ ಪಿ. ಜಿ. ಸೆಂಟರನ್ನು ತೆಗೆಯುವುದಿಲ್ಲ ಎಂದು ಹೇಳುವುದಕ್ಕೆ ಕಾರಣವೇನು ?

ಶ್ರೀ ಕೆ. ಹೆಚ್. ರಂಗನಾಥ್.— ನಾನು ಮೊದಲೇ ಹೇಳಿದಂತೆ ಬೆಳಗಾಂದನ್ನು ವ್ಯವಸ್ಥಿತವಾಗಿ ಮಾಡಿದ ಮೇಲೆ ಬಿಜಾಪುರದ ಬಗ್ಗೆ ನೋಡಿಕೊಳ್ಳೋಣ.

ಶ್ರೀ ಆರ್. ಬಿ. ಚೌಧರಿ.— ಯೂನಿವರ್ಸಿಟಿಯವರು ಆನ್ಯುಯಲ್ ಗ್ರಾಂಟನ್ನು ಕೇಳಿದ್ದಾರೆ. ೩೦ ಲಕ್ಷ ಬಿಜಾಪುರಕ್ಕೆ ಮಂತ್ರು ೨೦ ಲಕ್ಷ ರೂಪಾಯಿಗಳನ್ನು ಕಾರವಾರಕ್ಕೂ ಸಹಿತ ಕೊಟ್ಟಿದ್ದಾರೆ, ಇದು ನಿಜವೇ ?

ಶ್ರೀ ಕೆ. ಹೆಚ್. ರಂಗನಾಥ.— ಅಲ್ಲಿ ಸ್ನಾತಕೋತ್ತರ ಕೇಂದ್ರವನ್ನು ತೆಗೆಯದೇ ಇದ್ದಾಗ ಗ್ರಾಂಟ್‌ನ್ನು ಕೊಡುವ ಪ್ರಶ್ನೆಯೇ ಇಲ್ಲ.

ಅಧ್ಯಕ್ಷರು.—ಅಲ್ಲಿ ತೆಗೆದಮೇಲೆ ಗ್ರಾಂಟನ್ನು ಕೇಳಿ.

ಶಿವಾಜಿನಗರದಲ್ಲಿ ಸರ್ಕಾರಿ ಶಾಲಾ ಕಾಲೇಜುಂಗಳು ಉಪಯೋಗಿಸುತ್ತಿರುವ ಕಟ್ಟಡಗಳು

೧೩೪೫ ಶ್ರೀ ಎ. ಕೆ. ಆನಂತಕೃಷ್ಣ (ಶಿವಾಜಿನಗರ) ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರಿ ಶಾಲಾ ಕಾಲೇಜುಗಳು ಉಪಯೋಗಿಸುತ್ತಿರುವ ಕಟ್ಟಡಗಳು (ಪಟ್ಟಿ ನೀಡುವುದು).

ಆ) ಅಂತಹ ಕಟ್ಟಡಗಳಲ್ಲಿ ನೀರಿನ ವಿದ್ಯುಚ್ಛಕ್ತಿಯ ಶೌಚಗೃಹಗಳ ಹಾಗೂ ಆಟದ ಮೈದಾನ ಗಳು ಮತ್ತಿತರ ಸೌಲಭ್ಯಗಳ ನಿರ್ವಹಣಾ ವಿಧಾನ ಹಾಗೂ ವ್ಯವಸ್ಥೆ ಆಗಿದೆಯೇ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು)

ಅ)	ಸ್ವಂತ ಕಟ್ಟಡ ಹೊಂದಿರುವ ಶಾಲೆಗಳ ಸಂ:	ಬಾಡಿಗೆ ಕಟ್ಟಡದಲ್ಲಿರುವ ಶಾಲೆಗಳು	ಬಾಡಿಗೆ ರಹಿತ ಕಟ್ಟಡದಲ್ಲಿರುವ ಶಾಲೆಗಳು.	ಒಟ್ಟು
ಸರ್ಕಾರಿ ಪ್ರಾಥಮಿಕ ಶಾಲೆಗಳು.	೨೭	೪	೧	೩೨
ಸರ್ಕಾರಿ ಪ್ರೌಢ ಶಾಲೆ	೩	—	—	೩
ಸರ್ಕಾರಿ ಪದವಿಪೂರ್ವ ಕಾಲೇಜುಗಳು.	—	—	—	—
ಸರ್ಕಾರಿ ಪ್ರಥಮ ದರ್ಜೆ ಕಾಲೇಜು.	೧	—	—	೧
	೩೧	೪	೧	೩೬

(ಶಾಲಾ ಕಾಲೇಜುಗಳ ಪಟ್ಟಿಯನ್ನು ಲಗತ್ತಿಸಿದೆ.)

ಸರ್ಕಾರಿ ಶಾಲೆಗಳ ನಿರ್ವಹಣೆಗೆ ಪ್ರತಿವರ್ಷ ಶಿಕ್ಷಣ ಇಲಾಖೆಯ ಯೋಜನೇತರ ಆಯವ್ಯಯದಲ್ಲಿ ಹಣವನ್ನು ಒದಗಿಸಲಾಗುವುದು. ಈ ಹಣವನ್ನು ಎಲ್ಲಾ ಜಿಲ್ಲಾ ಪರಿಷತ್ತುಗಳಿಗೆ ಹಾಗೂ ಬೆಂಗಳೂರು ನಗರ ಜಿಲ್ಲಾಧಿಕಾರಿಗಳಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಮುಖಾಂತರ ವಿತರಣೆ ಮಾಡಲಾಗುತ್ತಿದೆ.

ಮಾಮೂಲೀ ವಾರ್ಷಿಕ ಸಣ್ಣ–ಪುಟ್ಟ ಮತ್ತಿತರೇ ಸಣ್ಣಪುಟ್ಟ ದುರಸ್ತಿ ಕಾರ್ಯವನ್ನು ವಿವಿಧೋದ್ದೇಶ ಇಂಜಿನಿಯರಿಂಗ್ ವಿಭಾಗ ಎಂದಿನಂತೆ ನಿರ್ವಹಿಸುತ್ತಿದೆ. ವಿಶೇಷ ರಿಪೇರಿ ಅಥವಾ ಸೌಲಭ್ಯ ಪೂರೈಕೆ ಆಗಬೇಕಾದರೆ ಸಂಬಂಧಪಟ್ಟ ಶಿಕ್ಷಣಾಧಿಕಾರಿಗಳ ಪ್ರಸ್ತಾವನೆ ಮೇರೆಗೆ ತೆಗೆದುಕೊಳ್ಳುತ್ತಾರೆ. ಈ ನಿರ್ವಹಣಾ ಕಾರ್ಯವನ್ನು ಕಾರ್ಯನಿರ್ವಾಹಕ ಅಭಿಯಂತರರು, ವಿವಿದೋದ್ದೇಶ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಇವರು ನಿರ್ವಹಿಸುತ್ತಾರೆ.

ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಬಂಧಿಸಿದಂತೆ ವಾರ್ಷಿಕ ದುರಸ್ತಿ ಕಾರ್ಯಗಳನ್ನು ಲೋಕೋಪಯೋಗಿ ಇಲಾಖೆಯೇ ನಿರ್ವಹಿಸುತ್ತದೆ. ವಿಶೇಷ ದುರಸ್ತಿಗಳಿದ್ದಲ್ಲಿ ಸಂಬಂಧ ಪಟ್ಟವರಿಂದ ಪ್ರಸ್ತಾವನೆ ಬಂದ ಮೇಲೆ ಲೋಕೋಪಯೋಗಿ ಇಲಾಖೆಯವರು ಈ ಕಾರ್ಯವನ್ನು ನಿರ್ವಹಿಸುತ್ತಾರೆ.

ಶಿವಾಜಿನಗರ ವಿಧಾನಸಭಾ ಮತಕ್ಷೇತ್ರದಲ್ಲಿ ಇರುವ ಸರ್ಕಾರಿ ಶಾಲೆಗಳ ಪಟ್ಟಿ

ಪ್ರಾಥಮಿಕ–ಸ್ವಂತ ಕಟ್ಟಡ :

೧ ಸರ್ಕಾರಿ ಮಾದರಿ ಶಾಲೆ, ಕ್ಲೀವ್‌ಲ್ಯಾಂಡ್ ಟೌನ್, ಶಿವಾಜಿನಗರ, ಬೆಂಗಳೂರು.
೨ ಸರ್ಕಾರಿ ತಮಿಳು ಮಾದರಿ ಶಾಲೆ, ಯನಿಯರ್ ಚರ್ಚ್, ಶಿವಾಜಿನಗರ
೩ ಸರ್ಕಾರಿ ತಮಿಳು ಮಾದರಿ ಶಾಲೆ, ತಿಮ್ಮಯ್ಯ ರಸ್ತೆ, ಶಿವಾಜಿನಗರ
೪ ಸರ್ಕಾರಿ ತಮಿಳು ಮಾದರಿ ಶಾಲೆ, ಬ್ಲಾಕ್ ಪಲ್ಲಿ, ಶಿವಾಜಿನಗರ
೫ ಸರ್ಕಾರಿ ತಮಿಳು ಮಾದರಿ ಶಾಲೆ, ವಸಂತನಗರ, ಶಿವಾಜಿನಗರ
೬ ಸರ್ಕಾರಿ ತೆಲಗು ಮಾದರಿ ಶಾಲೆ, ಕ್ವೀನ್ಸ್ ರಸ್ತೆ ಶಿವಾಜಿನಗರ
೭ ಸರ್ಕಾರಿ ತೆಲುಗು ಮಾದರಿ ಶಾಲೆ, ಓ.ಪಿ.ಹೆಚ್ ರಸ್ತೆ, ಶಿವಾಜಿನಗರ
೮ ಸರ್ಕಾರಿ ಉರ್ದು ಮಾದರಿ ಶಾಲೆ, ವಿ ಕೆ.ಒ ಶಿವಾಜಿನಗರ
೯ ಸರ್ಕಾರಿ ಉರ್ದು ಮಾದರಿ ಶಾಲೆ, ಬ್ಲಾಕ್‌ಪಲ್ಲಿ, ಶಿವಾಜಿನಗರ
೧೦ ಸರ್ಕಾರಿ ಉರ್ದು ಮಾದರಿ ಶಾಲೆ ರೆಹಮಾನಿಯ ತಿಮ್ಮಯ್ಯ ರಸ್ತೆ. ಬೆಂಗಳೂರು
೧೧ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ವಸಂತನಗರ, ಬೆಂಗಳೂರು
೧೨ ಸರ್ಕಾರಿ ಕನ್ನಡ ತಮಿಳು ಎಸ್.ಎನ್.ರಾವ್ ಶಾಲೆ, ಬೆಂಗಳೂರು
೧೩ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ, ಸುಲ್ತಾನ್ ಜಿ ಗುಂಟ, ಬೆಂಗಳೂರು

೧೪ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ, ಚಾಂದನಿ ಚೌಕ್
೧೫ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಟ್ಯಾಸ್ಕರ್ ಟೌನ್.
೧೬ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ನ್ಯೂ ಸವರ್‌ಲೈನ್ ಬೆಂಗಳೂರು
೧೭ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ವಾಟರಿ ಟೌನ್, ಬೆಂಗಳೂರು
೧೮ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಕಾರ್ನ್‌ಟೌನ್, ಬೆಂಗಳೂರು
೧೯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ತಮಿಳು, ಫ್ರೆಜರ್‌ಟೌನ್, ಬೆಂಗಳೂರು
೨೦ ಸರ್ಕಾರಿ ಬಾಲಿಕಾ ಮಾದರಿ ಪ್ರಾಥಮಿಕ ಶಾಲೆ, ಫ್ರೆಜರ್‌ಟೌನ್, ಬೆಂಗಳೂರು
೨೧ ಸರ್ಕಾರಿ ತಮಿಳು ಮಾದರಿ ಪ್ರಾಥಮಿಕ ಶಾಲೆ, ಪಾಟರಿ ಟೌನ್, ಬೆಂಗಳೂರು
೨೨ ಸರ್ಕಾರಿ ಉರ್ದು ಮಾದರಿ ಪ್ರಾಥಮಿಕ ಶಾಲೆ, ಫ್ರೆಜರ್‌ಟೌನ್, ಬೆಂಗಳೂರು
೨೩ ಸರ್ಕಾರಿ ಉರ್ದು ಮಾದರಿ ಪ್ರಾಥಮಿಕ ಶಾಲೆ, ಬಾಲಿಕಾ, ಫ್ರೆಜರ್‌ಟೌನ್, ಬೆಂಗಳೂರು
೨೪ ಸರ್ಕಾರಿ ಉರ್ದು ಮಾದರಿ ಪ್ರಾಥಮಿಕ ಶಾಲೆ, ನ್ಯೂ ಸವರ್ ಲೈನ್, ಬೆಂಗಳೂರು
೨೫ ಸರ್ಕಾರಿ ಬಾಲಕರ ಮಾಧ್ಯಮಿಕ ಶಾಲೆ, ಕಬ್ಬನ್ ಪೇಟೆ
೨೬ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕಬ್ಬನ್ ಪೇಟೆ
೨೭ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಸಂಪಂಗಿರಾಮನಗರ, ಬೆಂಗಳೂರು

ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಶಾಲೆಗಳ ಹೆಸರು

೨೮ ಸರ್ಕಾರಿ ಉರ್ದು ಮಾದರಿ ಪ್ರಾಥಮಿಕ ಶಾಲೆ, ಆರ್ಮ್‌ಸ್ಟ್ರಾಂಗ್ ರಸ್ತೆ
೨೯ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಟ್ಯಾಸ್ಕರ್‌ಟೌನ್
೩೦ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ, ಮಕಾನ್ ರಸ್ತೆ
೩೧ ಸರ್ಕಾರಿ ಬಾಲಕಿಯರ ಮಾಧ್ಯಮಿಕ ಶಾಲೆ, ಕಬ್ಬನ್ ಪೇಟೆ

ಬಾಡಿಗೆ ರಹಿತ ಕಟ್ಟಡದಲ್ಲಿ ನಡೆಯುವ ಶಾಲೆಯ ಹೆಸರು

೩೨ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಲತೀಫಿಯ, ಶಿವಾಜಿನಗರ

ಸರ್ಕಾರಿ ಪ್ರೌಢ ಶಾಲೆಗಳು–ಸ್ವಂತ ಕಟ್ಟಡ

೧ ಸರ್ಕಾರಿ ಪ್ರೌಢ ಶಾಲೆ, ಸಂಪಂಗಿರಾಮನಗರ
೨ ಸರ್ಕಾರಿ ಪ್ರೌಢಶಾಲೆ, ಪಾಟರಿಟೌನ್ | ಈ ಶಾಲೆಗಳು ಸರ್ಕಾರಿ ಪ್ರಾಥಮಿಕ ಶಾಲಾ
೩ ಸರ್ಕಾರಿ ಪ್ರೌಢಶಾಲೆ, ಪಯನೀರಚೇರಿ | ಕಟ್ಟಡದಲ್ಲಿ ಪಾಳಿ ಪದ್ಧತಿಯಲ್ಲಿ ನಡೆಯುತ್ತಿವೆ

ಸರ್ಕಾರಿ ಪದವಿ ಪೂರ್ವ ಕಾಲೇಜುಗಳು

೧ ಯಾವುದೂ ಇರುವುದಿಲ್ಲ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು

೧ ರಾಮನಾರಾಯಣ ಚಲ್ಲಾರಾಮ್ ಕಾಲೇಜು,

ಶ್ರೀ ಎ. ಕೆ. ಅನಂತಕೃಷ್ಣ —ಮಾನ್ಯ ಅಧ್ಯಕ್ಷರೇ, ಸ್ವಂತ ಕಟ್ಟಡ ಹೊಂದಿರುವ ಸರ್ಕಾರಿ ಶಾಲೆಗಳ ಸಂಖ್ಯೆ ೩೧, ಬಾಡಿಗೆ ಕಟ್ಟಡದಲ್ಲಿರುವ ಸರ್ಕಾರಿ ಶಾಲಾ ಕಾಲೇಜುಗಳು ೪, ಹಾಗೂ ಬಾಡಿಗೆ ರಹಿತ ಕಟ್ಟಡದಲ್ಲಿರುವ ಶಾಲೆಗಳು ೧ ಎಂದು ಒಟ್ಟು ೩೬ ಎಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಈ ೩೬ ಕಟ್ಟಡಗಳನ್ನು ನನಗೆ ತಿಳಿದ ಹಾಗೆ ಯಾವ ಒಂದು ಇಲಾಖೆಯವರು ಕೂಡಾ ಇದನ್ನು ರೆಗ್ಯುಲರ್ ಆಗಿ ಇನ್‌ಸ್ಪೆಕ್ಷನ್ ಮಾಡುತ್ತಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಸಂಪಂಗಿರಾಮನಗರದಲ್ಲಿ ಕಲ್ಯಾಣಿ ಸ್ಕೂಲ್ ಬಹಳ ಪ್ರಸಿದ್ಧವಾದಂಥ ಸ್ಕೂಲ್ ಇದೆ. ಅಲ್ಲಿ ೧೨೦೦ ಮಕ್ಕಳು ಓದುತ್ತಿದ್ದಾರೆ. ಅಲ್ಲಿ ಬಡಬಗ್ಗರು, ಹಿಂದುಳಿದವರು, ನಿಮ್ನ ವರ್ಗದವರು, ಮೈನಾರಿಟೀಸ್ ಇದ್ದಾರೆ. ಆ ಶಾಲೆಯ ಕಟ್ಟಡ ಬಹಳ ಹಳೆಯದಾಗಿದೆ. ಯಾರು ಅದನ್ನು ಗಿಫ್ಟ್ ಆಗಿ ಕೊಟ್ಟಿದ್ದಾರೋ ಏನೋ ನನಗೆ

ಗೊತ್ತಿಲ್ಲ. ಅದು ಪುರಾತನ ಕಾಲದ ಬಿಲ್ಡಿಂಗ್. ಅದನ್ನು ಯಾರಾದರೂ ತಾವೇ ಹೋಗಿ ನೋಡಿದ್ದಾರಾ ? ಅಲ್ಲಿ ಯಾವಾಗ ಬಿಲ್ಡಿಂಗ್ ಕೆಸಿದು ಬೀಳುತ್ತದೋ ನನಗೆ ಗೊತ್ತಿಲ್ಲ. ಅದನ್ನು ಇದುವರೆಗೂ ಯಾವ ಇಲಾಖೆಯವರು ನೋಡಿದ ಹಾಗೆ ಕಾಣುತ್ತಿಲ್ಲ ಎಂದು ಭಾವಿಸಿದ್ದೇನೆ. ಅಲ್ಲಿ ಕಟ್ಟಡವನ್ನು ಮೆಯಿನ್‌ಟೈನ್ ಮಾಡಿದ ಹಾಗೆ ಕಾಣುತ್ತಿಲ್ಲ. ರೆಗ್ಯೂಲರ್ ಮೆಯಿನ್‌ಟೈನೆನ್ಸ್‌ಗೆ ಪ್ರತಿ ವರ್ಷ ಇಷ್ಟು ಹಣ ಎಂದು ಇಡುತ್ತಿದ್ದಾರೆ, ಆದರೆ ಅದನ್ನು ಖರ್ಚು ಮಾಡಿದ ಹಾಗೆ ಕಾಣುತ್ತಿಲ್ಲ. ಪ್ರಾಪರ್ ಟಾಯ್‌ಲೆಟ್ ಫೆಸಿಲಿಟೀಸ್, ಬಾತ್‌ರೂಂ ಫೆಸಿಲಿಟೀಸ್, ನೀರಿನ ಸೌಲಭ್ಯಗಳು ಯಾವುದೂ ಅಲ್ಲಿಲ್ಲ: ಬೆಂಗಳೂರು ಸಿಟಿಯಲ್ಲಿರತಕ್ಕಂಥ ಈ ಒಂದು ಶಾಲೆ, ಸೆಂಟರ್ ಲೋಕೇಷನ್‌ನಲ್ಲಿ ಇರತಕ್ಕಂಥ ಜಾಗ, ಅಂಥ ಶಾಲೆಗೆ ಯಾವುದೇ ಒಂದು ಫೆಸಿಲಿಟೀಸ್ ಕೂಡಾ ಇಲ್ಲ. ಅಲ್ಲಿ ಯಾರು ಅದನ್ನು ಇನ್ಸ್‌ಪೆಕ್ಟ್ ಮಾಡುತ್ತಾರೋ ? ಆ ರೀತಿ ಇನ್ಸ್‌ಪೆಕ್ಟ್ ಮಾಡಿದ ಮೇಲೆ ಉಸ್ತುವಾರಿಯನ್ನು ನೋಡಿಕೊಳ್ಳುವವರು ಯಾರಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಇನ್ಸ್‌ಪೆಕ್ಟ್ ಮಾಡಿದ್ದೇವೆ ಎಂದು ಹೇಳಿದ ಮೇಲೆ ಅಲ್ಲಿ ಸರಿಯಾಗಿ ಇನ್ಸ್‌ಪೆಕ್ಟ್ ಮಾಡಿದ್ದಾರೆಯೇ ಇಲ್ಲವೇ ಎಂದು ನೋಡಿಕೊಳ್ಳುವವರು ಯಾರು ? ಅಲ್ಲಿ ಯಾವ ರಿಪೇರಿಯನ್ನು ಕೂಡ ಮಾಡಿಲ್ಲ. ಮೇಯಿನ್‌ಟೆನೆನ್ಸ್ ಅಂತೂ ಇಲ್ಲವೇ ಇಲ್ಲ. ಮಾನ್ಯ ಸಚಿವರು ತಪ್ಪು ಉತ್ತರದಲ್ಲಿ ಇಂಥ ಡಿಪಾರ್ಟ್‌ಮೆಂಟ್‌ನವರೇ ರಿಪೇರಿಯನ್ನು ಮಾಡುತ್ತಾರೆ ಎಂದು ಹೇಳಿಬಿಟ್ಟಿದ್ದಾರೆ. ಅಲ್ಲಿ ಸರಿಯಾಗಿ ಇನ್ಸ್‌ಪೆಕ್ಟ್ ಮಾಡಿಸಿ ಆ ಶಾಲೆಗೆ ಯಾವ ರಿಪೇರಿ ಆಗಬೇಕೂ ಆ ರೀತಿ ಆಗುವುದಕ್ಕೆ ಪಂತ್ತು ಆ ಮಕ್ಕಳಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ನಾಲ್ಕಾರು ಪ್ರಶ್ನೆಗಳನ್ನು ಒಂದೇ ಉಸಿರಿನಲ್ಲಿ ಕೇಳಿದ್ದಾರೆ. ಅಲ್ಲಿ ಇರತಕ್ಕಂಥ ಒಂದು ಪದ್ಧತಿ ಏನು ಎಂದು ಹೇಳಿದರೆ ಸರ್ಕಾರದ ಬಿಲ್ಡಿಂಗ್‌ಗಳು ಏನು ಇವೆ ಈ ವಿದ್ಯಾ ಇಲಾಖೆಯ ಕಟ್ಟಡಗಳು ಪಿ.ಡಬ್ಲ್ಯೂ.ಡಿ.ಗೆ ಸೇರುತ್ತದೆ ಹಾಗಾಗಿ ಇದರಲ್ಲಿ ಒಂದು ಕಾನೂನು ಏನು ಎಂದು ಹೇಳಿದರೆ ಆ ಕಟ್ಟಡದ ಅದರ ವ್ಯಾಲ್ಯೂ ಏನು ಇದೆ. ಅದರ ಶೇಕಡ ೩ ರಷ್ಟು ರಿಪೇರಿಗೆ ಸರ್ಕಾರ ತೆಗೆದಿಡುತ್ತದೆ. ಅದು ಪಿ.ಡಬ್ಲ್ಯೂ.ಡಿ. ಬಜೆಟ್‌ನಲ್ಲಿ ಬಂದುಬಿಡುತ್ತದೆ.

ಹೀಗಾಗಿ ವಿದ್ಯಾ ಇಲಾಖೆಯವರು ಪ್ರತ್ಯೇಕವಾಗಿ ಇದನ್ನು ನೋಡತಕ್ಕದ್ದು. ಇದನ್ನು ರಿಪೇರಿ ಮಾಡತಕ್ಕ ಒಂದು ಕ್ರಮ ಇಲ್ಲ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿರುವುದರಲ್ಲಿ ಪಾಸ್ತವಾಂಶ ಇದೆ. ಇವೊತ್ತು ಈ ಒಂದು ಸ್ಥಿತಿ ಇಲ್ಲದೇ ಇರುವುದರಿಂದ ಸಾಕಷ್ಟು ಕಟ್ಟಡಗಳು ಕೆಟ್ಟ ಪರಿಸ್ಥಿತಿಯಲ್ಲಿವೆ. ಅದನ್ನು ನೋಡಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಆದರೆ ಈ ಒಂದು ಕ್ರಮ ಏನು ಇದೆ ಇದರಂತೆ ಪಿ.ಡಬ್ಲ್ಯೂ.ಡಿ.ಗೆ ಸೇರಿರುತ್ತದೆ. ಅಪರೂ ಹಣವನ್ನು ಒದಗಿಸುತ್ತಾರೆ. ಅವರು ರಿಪೇರಿ ಮಾಡುತ್ತಾರೆ. ಆನ್ಯೂಯಂಲ್ ರಿಪೇರಿ ಎಂದು ಮಾಡುತ್ತಾರೆ. ಇದು ಬದಲು ಆಗದ ಹೊರತು ಮಾನ್ಯ ಸದಸ್ಯರು ಏನು ಸಲಹೆ ಕೊಡುತ್ತಿದ್ದಾರೆ, ಆ ತರಹದ ಸಲಹೆಯನ್ನು ಜಾರಿ ಮಾಡುವುದಕ್ಕೆ ಸಾಧ್ಯ ಆಗುವುದಿಲ್ಲ.

ಶ್ರೀ ಎ. ಕೆ. ಅನಂತಕೃಷ್ಣ.—ಮಾನ್ಯ ಮಂತ್ರಿಗಳು ಹೇಳಿದ್ದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ನಾನು ಮುಖ್ಯವಾಗಿ ಹೇಳುತ್ತಾ ಇರುವುದು ಪಿ.ಡಬ್ಲ್ಯೂ.ಡಿ. ಅವರು ಇದನ್ನು ಮಾಡಬೇಕೆಂದು ಹೇಳಿದರೆ ೧೨೦ ಮಕ್ಕಳು ವಿದ್ಯಾಭ್ಯಾಸ ಪಡೆಯುತಕ್ಕ ಶಾಲೆಯ ಕಟ್ಟಡ ಅದು. ಈ ಬಗ್ಗೆ ಏನು ಸವಲತ್ತುಗಳು ಇದೆಯೋ ಅಥವಾ ಇಲ್ಲವೋ ಅದನ್ನು ನೋಡಿ ಮಕ್ಕಳಿಗೆ ಕೊಟ್ಟರೆ ತಾನೇ ವಿದ್ಯಾಭ್ಯಾಸ ಸರಿಯಾಗಿ ನಡೆಯಬೇಕಾಗಿರುತ್ತದೆ. ಮತ್ತು ಯೋಗ್ಯವಾಗಿ ಇರಬೇಕಾಗುತ್ತದೆ. ಮತ್ತೊಂದು ಸಣ್ಣ ಉದಾಹರಣೆಯನ್ನು ಕೂಡಬಯಸುತ್ತೇನೆ. ಈ ಶಾಲೆಯಲ್ಲಿ ಹಳೆಯ ಕಾಲದ ಒಂದು ಕಲ್ಯಾಣಿ ಇದೆ, ಮಳೆ ಬಂದರೆ ನೀರು ತುಂಬಿಕೊಂಡು ಹೋಗುತ್ತದೆ. ಮಕ್ಕಳು ಅಲ್ಲಿ ಮುಳುಗಿ ಸಾಯುವಂತಹ ಪರಿಸ್ಥಿತಿ ಕೂಡ ಹಿಂದೆ ಆಗಿದೆ. ಈ ವಿಷಯದಲ್ಲಿ ಕೂಡ ಸಂಬಂಧಪಟ್ಟ ಅಧಿಕಾರಿಗಳ ಗಮನವನ್ನು ಸಾಕಷ್ಟು ಸೆಳೆದಿದ್ದಾರೆ. ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಬರಮಾಡಿಕೊಂಡು ಕೂಡ ವಿಷಯ ಹೇಳಿದ್ದಾರೆ. ಆದರೂ ಸಹ ಯಾರೂ ಅದನ್ನು ಗಮನಿಸಿಲ್ಲ. ನೀರು ನಿಂತು ಹೋದರೆ ಹೊರಗಡೆ ಕಳಿಸುವುದಕ್ಕೆ ಒಂದು ಪ್ರಯತ್ನ ಮಾಡಲಿಲ್ಲ. ವಿದ್ಯಾ ಇಲಾಖೆಗೆ ಕೇಳಿದರೆ ಪಿ. ಡಬ್ಲ್ಯೂ. ಡಿ. ಕಡೆಗೆ ತೋರಿಸುವುದು, ಪಿ. ಡಬ್ಲ್ಯೂ. ಡಿ. ಯವರು ವಿದ್ಯಾ ಇಲಾಖೆ ಕಡೆ ತೋರಿಸುವುದು. ಇವರಿಬ್ಬರ ಮಧ್ಯೆ ಮಕ್ಕಳು ನಶಿಸಿ ಹೋಗುತ್ತಾರೆ. ಈ ಒಂದು ಪದ್ಧತಿ ಸರಿಯಲ್ಲ, ಅದನ್ನು ತಾವು ರ್ಯಾಷನಲೈಸ್ ಮಾಡಬೇಕು. ಇಬ್ಬರೂಸೇರಿ ಇಲ್ಲವೇ ಪ್ರತ್ಯೇಕವಾಗಿ ಒಂದು ಉಸ್ತುವಾರಿ ಇರುವಂತಹ ಕೆಲಸ ಮಾಡುವುದಕ್ಕೆ ಏನಾದರೂ ಕ್ರಮ ಮಾಡುತ್ತಾರೆಯೇ, ಅಲ್ಲಿ ಬಹಳ ಕಷ್ಟ ಇದೆ. ೧೨೦ ಮಕ್ಕಳು ಇದ್ದಾರೆ. ಸಣ್ಣದಾದ ಒಂದು ಜಾಗ ಇದೆ. ಅಲ್ಲಿ ೧೦ ಕೊಠಡಿಗಳು ಕೂಡ ಇಲ್ಲ.

೧೨೦೦ ಮಕ್ಕಳಿಗೆ ಎಷ್ಟು ಕಂಜೆಸ್ಟೆಡ್ ಇದೆ ಅಂದರೆ ಆಷ್ಟು ಕಂಜೆಸ್ಟೆಡ್ ಇದೆ, ಕ್ಲಾಸ್ ರೂಮ್ಸ್‌ಗಳು ಸಹ ಕಂಜೆಸ್ಟೆಡ್ ಆಗಿದೆ. ಬಹಳ ಲೋ ಲೆವೆಲ್‌ನಲ್ಲಿ ಆ ಹಳೆಯ ಕಟ್ಟಡವಿದೆ. ಅದು ಪುರಾತನವಾದ ಕಾಲದ್ದು. ಅದು ಸರ್ಕಾರದ ಗಮನಕ್ಕೆ ಬಂದಿಲ್ಲ, ವಿದ್ಯಾ ಇಲಾಖೆಯ ಗಮನಕ್ಕೆ ಬಂದಿಲ್ಲ, ಪಿ. ಡಬ್ಲ್ಯೂ. ಡಿ ಗಮನಕ್ಕೆ ಬಂದಿಲ್ಲವೆಂದರೆ ಮಕ್ಕಳ ವಿದ್ಯಾಭ್ಯಾಸ ಬೆಂಗಳೂರು ನಗರದಲ್ಲಿ ಅದೂ ಸೆಂಟರ್ ಲೋಕೇಶನ್‌ನಲ್ಲಿ...

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸದಸ್ಯರು ಪ್ರಶ್ನೆಯಲ್ಲಿ ಕಲ್ಯಾಣಿಯಿಂದ ತೊಂದರೆ ಆಗಿದೆ ಎಂದು ಪ್ರಸ್ತಾಪ ಮಾಡಿದ್ದರೆ ಬೇರೆ ಕಲಾಪದಿಂದ ಅದಕ್ಕೆ ನಾನು ಕ್ರಮ ತೆಗೆದುಕೊಳ್ಳುವುದಕ್ಕೆ ಮತ್ತು ಮಾನ್ಯ ಸದಸ್ಯರಿಗೆ ವಿಷಯವನ್ನು ತಿಳಿಸುವುದಕ್ಕೆ ಅನುಕೂಲವಾಗುತ್ತಿತ್ತು. ಮಾನ್ಯ ಸದಸ್ಯರು ಈ ವಿಷಯವನ್ನು ಈಗ ನನ್ನ ಗಮನಕ್ಕೆ ತಂದಿದ್ದಾರೆ. ಅದನ್ನು ಪರಿಶೀಲನೆ ಮಾಡಿ ಅವರು ಏನಾ ಹುತದ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ, ಅದು ಆಗದೇ ಇರುವ ಹಾಗೆ ಏನಾದರೂ ಕ್ರಮ ತೆಗೆದಂಕೊಳ್ಳುವುದಕ್ಕೆ ಸಾಧ್ಯ ಆದರೆ ಅದನ್ನು ತೆಗೆದುಕೊಳ್ಳಲಂ ಪ್ರಯತ್ನ ಮಾಡುತ್ತೇನೆ.

ಶ್ರೀ ಹರ್ಷ ಕುಮಾರ್ ಗೌಡ.—ಈಗ ಸರ್ಕಾರದ ಆಸ್ತಿ ಎಂದು ಹೇಳಿದರೆ ಅದನ್ನು ನೋಡಿ ಕೊಳ್ಳುವ ಜವಾಬ್ದಾರಿ, ಹೊಣೆಗಾರಿಕೆ ವಿದ್ಯಾ ಇಲಾಖೆಗೆ ಇದೆಯೋ ಅಥವಾ ಇಲ್ಲವೋ ಎಂಬುದನ್ನು ಮಾನ್ಯ ಮಂತ್ರಿಯವರು ಸ್ಪಷ್ಟಪಡಿಸಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಹೇಳಿದ್ದೇನೆ. ಇದು ಪಿ.ಡಬ್ಲ್ಯೂ.ಡಿ. ಯವರ ಕಕ್ಷೆಯಲ್ಲಿ ಬರುವುದರಿಂದ ಈ ತರಹ ಒಂದು ಪದ್ಧತಿ ಇದೆ. ಇದನ್ನು ಬದಲಾವಣೆ ಮಾಡಬೇಕು, ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಎ. ಕೆ. ಅನಂತಕೃಷ್ಣ.—ಕಲ್ಯಾಣಿ ವಿಷಯವಾಗಿ ಹೇಳುವುದಾದರೆ, ಕಲ್ಚರಲ್ ಆಕ್ಟಿವಿಟೀಸ್ ಸಹ ಮಾನ್ಯ ಮಂತ್ರಿಗಳ ಕೈಯಲ್ಲಿರುವುದರಿಂದ ಈ ಕಲ್ಯಾಣಿಯನ್ನು ಒಳ್ಳೆಯ ಕಲ್ಚರಲ್ ಆಕ್ಟಿವಿಟೀಸ್‌ಗೆ ಅನುಕೂಲ ಆಗುವ ಹಾಗೆ ಬಳಸಿಕೊಳ್ಳಬೇಕು. ಈ ಒಂದು ಕಲ್ಯಾಣಿಯ ಅಭಿವೃದ್ಧಿ ಪಡಿಸುವುದಕ್ಕೆ ಸಾಕಷ್ಟು ಅವಕಾಶ ಇದೆ, ಇದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ?

ಅಧ್ಯಕ್ಷರು.—ಕಲ್ಯಾಣಿಗೂ ಕಲ್ಚರಲ್ ಆಕ್ಟಿವಿಟೀಸ್‌ಗೂ ಏನು ಸಂಬಂಧವಿದೆ ?

ಶ್ರೀ ಕೆ. ಹೆಚ . ರಂಗನಾಥ್.—ಒಂದೇ ಉಸಿರಿಗೆ ಮಾನ್ಯ ಸದಸ್ಯರು ಏನೋ ಹೇಳುತ್ತಿದ್ದಾರೆ ಅಲ್ಲಿ ಕಲ್ಯಾಣಿ ಇದೆ. ಮಕ್ಕಳು ಮುಳುಗುತ್ತಿದ್ದಾರೆ, ಸಣ್ಣ ಮಕ್ಕಳಿಗೆ ತೊಂದರೆ ಆಗಿದೆ ಎಂದು ಹೇಳಿ, ತಿರುಗಿ ಅದನ್ನು ಸರಿಮಾಡಿ ಕಲ್ಚರಲ್ ಆಕ್ಟಿವಿಟೀಸ್‌ಗೆ ಉಪಯೋಗ ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ ಅದು ಆಗುವುದಿಲ್ಲ.

ಶ್ರೀ ಎ. ಕೆ. ಅನಂತಕೃಷ್ಣ.—ನೀರು ಹರಿದು ಹೋಗುವುದಕ್ಕೆ ಅವಕಾಶ ಇರುವ ಹಾಗೆ ಏನಾದರೂ ವ್ಯವಸ್ಥೆ ಮಾಡಬೇಕು ಎಂದು ಹೇಳಿದ್ದೇನೆ. ಆ ಕಲ್ಯಾಣಿಯನ್ನು ಸದುಪಯೋಗ ಮಾಡಿ ಎಂದು ಹೇಳುತ್ತೇನೆ. ತಾವು ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿದರೆ ಎಲ್ಲಾ ವಿಷಯ ಗೊತ್ತಾಗುತ್ತದೆ.

ಅಧ್ಯಕ್ಷರು.—ಕಲ್ಯಾಣಿಯನ್ನು ಮುಚ್ಚಿಸುವುದಕ್ಕೆ ಪ್ರಯತ್ನ ಮಾಡಬೇಕು....

ಶ್ರೀ ಎ. ಕೆ. ಅನಂತಕೃಷ್ಣ.—ಇಲ್ಲ. ಅದನ್ನು ಮುಚ್ಚುವುದು ಬೇಡ.

ಸಂಗೀತ, ನಾಟಕ, ಸಾಹಿತ್ಯ, ಜಾನಪದ ಇತ್ಯಾದಿ ಅಕಾಡೆಮಿಗಳಿಗೆ ಸದಸ್ಯರಂಗಳ ನಾಮಕರಣ

೨೬೫. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಶಿಕ್ಷಣ, ಯುವಜನ ಸೇವಾ ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಸಂಗೀತ, ನಾಟಕ, ಸಾಹಿತ್ಯ, ಜಾನಪದ ಇತ್ಯಾದಿ ಅಕಾಡೆಮಿಗಳಿಗೆ ಇದುವರೆಗೆ ಸ್ವಾಯತ್ತತೆ ಕೊಡದಿರಲು ಕಾರಣವೇನು ?

ಆ) ಈ ಅಕಾಡೆಮಿಗಳಲ್ಲಿ ಸರ್ಕಾರದ ಹಸ್ತಕ್ಷೇಪ ಇರುವುದು ನಿಜವಲ್ಲವೇ ?